ಶ್ರೀ ಎಚ್. ರಾಜಯ್ಯ.—ನಮಗೆ ವರದಿ ಬಂದಿರತಕ್ಕ ಪ್ರಕಾರ ಅಲ್ಲಿ 58,960 ಜಾನುವಾರುಗಳಿರುತ್ತವೆ. ಅಷ್ಟಕ್ಕೆ ಸಾಕಷ್ಟು ಆಸ್ಪತ್ರೆಗಳು ಈಗಾಗಲೇ ಅಲ್ಲಿರುತ್ತವೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ತಾವು ಹೇಳತಕ್ಕ ಸಂಖ್ಯೆ ಯಾವ ವರ್ಷದ ಸೆನ್ಸಸ್ ಪ್ರಕಾರ?

ಶ್ರೀ ಎಚ್. ರಾಜಯ್ಯ.—ಹಾಲಿ ನಮ್ಮಲ್ಲಿರತಕ್ಕ ಅಂಕಿ ಅಂಶಗಳ ಪ್ರಕಾರ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಈಗ ಅಲ್ಲಿ 80 ಸಾವಿರಕ್ಕೂ ಹೆಚ್ಚಾಗಿ ಜಾನುವಾರುಗಳಿರುತ್ತವೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ರಾಜಯ್ಯ.—ಹಾಗೆ ಜಾನುವಾರುಗಳ ಸಂಖ್ಯೆ ಎಲ್ಲಿ ಹೆಚ್ಚಾಗಿದೆಯೋ ಅಲ್ಲಿಗೆ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಆಸ್ಪತ್ರೆಗಳನ್ನು ಕೊಡರಾಗುತ್ತದೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ಒಂದು ತಾಲ್ಲೂಕಿಗೆ ಎಷ್ಟು ಈ ಕೋಟ ಇರಬೇಕೆಂದು ನಿಗದಿ ಮಾಡಿದ್ದಾರೆ?

ಶ್ರೀ ಎಚ್. ರಾಜಯ್ಯ.—ಜಾನುವಾರು ಸಂಖ್ಯೆ ನೋಡಿಕೊಂಡು ಮಾಡರಾಗುತ್ತೆ. ತಾಲ್ಲೂಕಿಗಿಷ್ಟು ಕೋಟ ಎಂತ ಏನೂ ನಿಗದಿ ಮಾಡಿಲ್ಲ. ಈಗ ಹಾಲಿ ಕೋಲಾರ ಜಿಲ್ಲೆಯಲ್ಲಿ ಆರು ಲಕ್ಷ ಜಾನುವಾರುಗಳಿವೆ. ಅಲ್ಲಿ 26 ಪಶುವೈದ್ಯಶಾಲೆ ಇರುತ್ತವೆ.

—

REPAIRS TO THE BUILDING OF DISTRICT BOARD HIGH SCHOOL AT SRINIVASPUR.

*Q.—500. Sri B. L. NARAYANASWAMY (Mulbagal).

Will the Government be pleased to state:—

(*a*) whether it has come to the notice of the Government that the District Board High School building at Srinivaspur is without annual repairs for the past 10 years ;

(*b*) the arrangements made for the maintenance of such schools consequent upon the abolition of the District Boards?

A.—Sri T. SUBRAMANYA (Minister for Development and Local Self-Government).—

(*a*) Yes.

(*b*) They are to be maintained by the Government through the agency of the Deputy Commissioners. These High School buildings which were constructed out of the funds of the former District Boards vest, at present, with Government.

ಶ್ರೀ ಬಿ.ಎಲ್. ನಾರಾಯಣಸ್ವಾಮಿ.—ಕಳೆದ ಹತ್ತು ವರ್ಷಗಳಿಂದಲೂ ಈ ಕಟ್ಟಡ ಹೀಗೇ ಬಿದ್ದಿದ್ದರೆ ಇದರ ಗತಿಯೇನಾಗಬೇಕು ಸ್ವಾಮಿ?

ಶ್ರೀ ಟಿ. ಸುಬ್ರಮಣ್ಯ.—ಈ ಕಟ್ಟಡ ಆದುದ್ದೇ 1954-55ರಲ್ಲಿ. ಆದರೆ ಈ ಕಟ್ಟಡ ಆಗುವಾಗಲೇ ಇದರಲ್ಲಿ ಸ್ವಲ್ಪ ನ್ಯೂನತೆಗಳಿದ್ದವು. ಅದನ್ನು ಆ ಕಟ್ಟಡದ ಕಂಟ್ರಾಕ್ಟರ್ ಸರಿಪಡಿಸಬೇಕಾಗಿದೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಈಗ 6-7 ವರ್ಷಗಳಿಂದಲೂ ಆದ ಪ್ರಗತಿ ಇಷ್ಟೇನೇ? ಈ ಬದುಕಿಗೆ ಯಾರು ಜವಾಬ್ದಾರರು ಆ ಲೋಪದೋಷಣಗಳನ್ನು ನಡೆಸಿದವರು ಯಾರು, ಅದಕ್ಕೆ ಕಾರಣವೇನು ?

ಶ್ರೀ ಟಿ. ಸುಬ್ರಹ್ಮಣ್ಯ.—ಈ ಕಟ್ಟಡವನ್ನು ಹಿಂದೆ ಜಿಲ್ಲಾ ಬೋರ್ಡಿನವರು ಕಟ್ಟಿಸಿದರು. ಈಗ ಜಿಲ್ಲಾ ಬೋರ್ಡಿನಲ್ಲಿ ಇದು ಜಿಲ್ಲಾಧಿಕಾರಿಗಳ ಆಡಳಿತದಲ್ಲಿದೆ. ಸ್ವಲ್ಪದರಲ್ಲೇ ಇದು ಎರೇಜ್ ಪಂಚಾಯತ್ ಅಂಡ್ ತಾಲ್ಲೂಕ್ ಬೋರ್ಡುಗಳ ಆಕ್ಟ್ ಪ್ರಕಾರ ತಾಲ್ಲೂಕ್ ಬೋರ್ಡಿಗೋ ಏನೋ ವಹಿಸಲಾಗುತ್ತೆ. ಈಗ ಇದರ ದುರಸ್ತಿಗಾಗಿ 52 ಸಾವಿರ ರೂಪಾಯಿಗಳ ಅಂದಾಜು ತಯಾರಾಗಿದೆ. ಇದನ್ನು ಆದಷ್ಟು ಬೇಗ ನರಿಪಡಿಸಲಾಗುತ್ತೆ.

ಶ್ರೀ ಇ. ನಾರಾಯಣಗೌಡ.—ಜಿಲ್ಲಾಧಿಕಾರಿಗಳೇಕೆ ದುರಸ್ತಿ ಮಾಡಿಸಬಾರದು?

ಶ್ರೀ ಟಿ. ಸುಬ್ರಹ್ಮಣ್ಯ.—ಡಿಸ್ಟ್ರಿಕ್ಟ್ ಬೋರ್ಡಿನ ದುಡ್ಡಿದ್ದರೆ ಆಗಬಹುದು.

Sri G. VENKATAI GOWDA.—Since they are now vested in the Government, will the Government make it a condition to repair ?

Sri T. SUBRAMANYA.—If the money is available at the credit of the District Boards, certainly it will be done ; not otherwise. A decision will have to be taken as to whom it is to be entrusted.

Sri G. VENKATAI GOWDA.—When are they going to take a decision?

Sri T. SUBRAMANYA.—As early as possible.

Sri K. L. NARASIMHIAH.—Who] is to deposit the money; is it the District Board or the Government?

Sri T. SUBRAMANYA.—Naturally it is the District Board property; it is not the liability of the Government.

ಶ್ರೀ ಕೆ. ಎಲ್. ನರಸಿಂಹಯ್ಯ.—ಮುಂದೆ ಬರತಕ್ಕ ತಾಲ್ಲೂಕ್ ಬೋರ್ಡುಗಳಲ್ಲಿ ಇದಕ್ಕೆ ಹಣವಿಲ್ಲದಿದ್ದರೇನು ಮಾಡಬೇಕು?

ಶ್ರೀ ಟಿ. ಸುಬ್ರಹ್ಮಣ್ಯ.—ಪಾಪ್ಯುಲರ್ ಕಾಂಟ್ರಿಬ್ಯೂಷನ್ ಎತ್ತಿ ಇದನ್ನು ನರಿಪಡಿಸಬೇಕು.

ಡಾ. ಬಿ. ಕೆ. ನಾಗೂರ್.—ಮುಂದೇನಾದರೂ ಮಳೆ ಬಂದು ಈ ಕಟ್ಟಡ ಬಿದ್ದು ಹೋದರೆ ಆಗ ಸರ್ಕಾರದವರು ಕಣ್ಣು ತೆರೆಯುತ್ತಾರೇನು?

ಶ್ರೀ ಟಿ. ಸುಬ್ರಹ್ಮಣ್ಯ.—ಊಹಾಪೋಹದ ಪ್ರಶ್ನೆ. ಉತ್ತರ ಕೊಡಲು ಸಾಧ್ಯವಿಲ್ಲ.

Sri A. R. BADRINARAYAN.—Are these District Board buildings handed over to the Taluk Boards?

Sri T. SUBRAMANYA.—It is not yet settled. It comes within the pool of assets of the District Board to be distributed amongst the various Taluk Boards.

Mr. SPEAKER.—Questions are over.

QUESTIONS FOR ANSWERS ON THE DAY.

(but not taken up)

BLACK MARKETING OF CEMENT IN DAVANGERE TOWN.

*Q.—388. K.T. JAMBANNA (Davangere).—

Will the Government be pleased to state:—

(*a*) whether they are aware that as the cement quota for Davangere town has been decreased, cement is being sold in the black market at Rs. 10 per bag in that town ;

(*b*) the action taken by Government in the matter?